ಇ) ರಾಜ್ಯದ ಪ್ರಸಿದ್ಧ ಯಾತ್ರಾ ಸ್ಥಳವಾದ ಧರ್ಮಸ್ಥಳದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಿ ಸರ್ವಜನಿಕರಿಗೆ ಅನುಕೂಲ ಮಾಡಿಕೊಡುವ ಸಂಬಂಧದಲ್ಲಿ ಸರ್ಕಾರವು ಶೀಘ್ರ ಕ್ರಮ ಕೈಗೊಳ್ಳುವುದೇ;

ಈ) ಸದರಿ ಆರೋಗ್ಯ ಕೇಂದ್ರದಲ್ಲಿ ಖಾಲಿ ಇರುವ ವೈದ್ಯಾಧಿಕಾರಿ ಹುದ್ದೆಯನ್ನು ಯಾವಾಗ ತುಂಬಲಾಗುವುದು ಹಾಗೂ ಬೆಳ್ತಂಗಡಿ ತಾಲ್ಲೂಕು ಪ್ರದೇಶದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಖಾಲಿ ಇರುವ ಸಿಬ್ಬಂದಿಯನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ. ಜಿಲ್ಲಾ ಪಂಚಾಯಿತಿಯಿಂದ ಪ್ರಸ್ತಾವನೆ ಬಂದ ನಂತರ ಪರಿಶೀಲಿಸಲಾಗುವುದು.

ಆ) ಜಿಲ್ಲಾ ಪಂಚಾಯಿತಿಯಿಂದ ಪ್ರಸ್ತಾವನೆ ಬಂದಿರುವುದಿಲ್ಲ ಪ್ರಸ್ತಾವನೆ ಬಂದ ಕೂಡಲೇ ಕ್ರಮ ಕೈಗೊಳ್ಳುವುದು.

ಇ) ಧರ್ಮಸ್ಥಳ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೆರಿಸಲು ಜಿಲ್ಲಾ ಪಂಚಾಯಿತಿಯಿಂದ ಸಾಕಷ್ಟು ಅನುದಾನ ಒದಗಿಸಿಕೊಂಡು ಪ್ರಸ್ತಾವನೆ ಸಲ್ಲಿಸಿದಲ್ಲಿ ಪರಿಶೀಲಿಸಲಾಗುವುದು.

ಈ) ಪ್ರಾಥಮಿಕ ಆರೋಗ್ಯ ಕೇಂದ್ರ ಧರ್ಮಸ್ಥಳದಲ್ಲಿ ಖಾಯಂ ಆಗಿ ವೈದ್ಯರನ್ನು ನೇಮಕ ಮಾಡಲಾಗಿದ್ದು, ಸದರಿ ವೈದ್ಯರು ದಿನಾಂಕ 19-11-2002 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಖಾಲಿಯಿರುವ ಹುದ್ದೆಗಳಲ್ಲಿ 4553 ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ ನೇಮಕ ಮಾಡುವ ಕಾರ್ಯ ಪ್ರಕ್ರಿಯೆಯಲ್ಲಿರುತ್ತದೆ. ಹಾಗೂ ಕೆಲವು ಹುದ್ದೆಗಳಲ್ಲಿ ಬ್ಯಾಕ್ ಲಾಗ್ ಹುದ್ದೆಗಳನ್ನು ಗುರುತಿಸಿ ಅತಿ ಶೀಘ್ರದಲ್ಲಿಯೇ ನೇಮಕಾತಿ ಮಾಡಲಾಗುವುದು.

## ಕರ್ನಾಟಕ ರಾಜ್ಯಕ್ಕೆ ಸರ್ವ ಶಿಕ್ಷಣ ಅಭಿಯಾನ ಯೋಜನೆ

1018 (1333) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯಕ್ಕೆ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ದೊರಕಿರುವ ಅನುದಾನವೆಷ್ಟು; ಈ ಅನುದಾನದಲ್ಲಿ ಬೀದರ್ ಜಿಲ್ಲೆಗೆ ಹಾಗೂ ಬಾಲ್ಕಿ ಮತ ಕ್ಷೇತ್ರ ನೀಡಲಾಗಿರುವ ಅನುದಾನವೆಷ್ಟು; (ವಿವರ ಒದಗಿಸುವುದು)

ಆ) ಬಾಲ್ಕಿ ಕ್ಷೇತ್ರಕ್ಕೆ ಒದಗಿಸಲಾದ ಅನುದಾನದಲ್ಲಿ ಇದುವರೆಗೆ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಹಾಗೂ ಇದಕ್ಕೆ ಖರ್ಚಾಗಿರುವ ಹಣವೆಷ್ಟು;

ಇ) ಖರ್ಚಾಗದೇ ಹಣ ಉಳಿದಿದ್ದರೆ ಉಳಿದ ಒಂದು ತಿಂಗಳಿನಲ್ಲಿ ಯಾವ ರೀತಿಯಲ್ಲಿ ಹೇಗೆ ಖರ್ಚು ಮಾಡಲಾಗುವುದು?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು) :

ಅ) ಸರ್ವ ಶಿಕ್ಷ ಅಭಿಯಾನ ಕಾರ್ಯಕ್ರಮದ ಅನುಷ್ಠಾನಕ್ಕಾಗಿ
2001-02ನೇ ಸಾಲಿಗೆ;

ಕೇಂದ್ರ ಸರ್ಕಾರಿಂದ ರೂ.5023.81 ಲಕ್ಷ ಹಾಗೂ ರಾಜ್ಯ ಸರ್ಕಾರದಿಂದ ರೂ.1014.82 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ

2002-03ನೇ ಸಾಲಿಗೆ;

ಕೇಂದ್ರ ಸರ್ಕಾರ ರೂ.3924.59 ಲಕ್ಷ ಹಾಗೂ ರಾಜ್ಯ ಸರ್ಕಾರದಿಂದ ರೂ.1544.71 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಬೀದರ್ ಜಿಲ್ಲೆಗೆ ಸರ್ವ ಶಿಕ್ಷ ಅಭಿಯಾನ ಯೋಜನೆಯಡಿಯಲ್ಲಿ ಈ ಕೆಳಗಿನಂತೆ ಹಣ ಇಲ್ಲಿಯವರೆಗೆ ಮಂಜೂರಾಗಿದೆ.

| | | | |
|---|---|---|---|
| 1) | ಪೂರ್ವಸಿದ್ದತಾ ಚಟುವಟಿಕೆಗಾಗಿ | - | 9.25 ಲಕ್ಷ |
| 2) | 2001-02 ಸಾಲಿಗಾಗಿ ಬಜೆಟ್ | - | 8.50 ಲಕ್ಷ |
| 3) | 2002-03 ಸಾಲಿಗಾಗಿ ನಿಗದಿಯಾದ ಬಜೆಟ್ | - | 333.276 ಲಕ್ಷ |
| | ಒಟ್ಟು | | **351.02 ಲಕ್ಷ** |

ರೂ.351.02 ಲಕ್ಷ ಹಣ ಮಂಜೂರಾಗಿದೆ. ಇಲ್ಲಿಯವರೆಗೆ ಬೀದರ್ ಜಿಲ್ಲಾ ಅನುಷ್ಠಾನ ಸಮಿತಿಗೆ ರೂ.167.353 ಲಕ್ಷ ಹಣ ಬಿಡುಗಡೆಯಾಗಿದೆ. ಈ ಹಣದಲ್ಲಿ ಬಾಲ್ಕಿ ಮತಕ್ಷೇತ್ರಕ್ಕೆ ರೂ.42.825 ಲಕ್ಷ ಹಣ ಮಂಜೂರಾಗಿದೆ. ಈ ಹಣದಲ್ಲಿ ರೂ.32.825 ಲಕ್ಷ ಹಣ ಬಿಡುಗಡೆ ಮಾಡಲಾಗಿದೆ.

ಆ) ಬಾಲ್ಕಿ ತಾಲ್ಲೂಕಿಗೆ ಬಿಡುಗಡೆಯಾದ ರೂ.32.825 ಲಕ್ಷ ಹಣದಲ್ಲಿ ಈ ಕೆಳಕಂಡ ಕಾರ್ಯಕ್ರಮಕ್ಕೆ ಖರ್ಚು ಮಾಡಲಾಗಿದೆ.

| | | |
|---|---|---|
| 1) | ವಿದ್ಯುತ್ 40 ಶಾಲೆಗಳಿಗೆ | 2.00 ಲಕ್ಷ |
| 2) | ಶೌಚಾಲಯ 40 ಶಾಲೆಗಳಿಗೆ | 10.00 ಲಕ್ಷ |
| 3) | ಎಲ್ಲಾ ಸರ್ಕಾರಿ ಶಾಲೆಗಳ ಶಾಲಾ ಅನುದಾನ | 6.70 ಲಕ್ಷ |
| 4) | ಕಟ್ಟಡ ನಿರ್ವಹಣೆ ದುರಸ್ಥಿ ಎಲ್ಲಾ ಸರ್ಕಾರಿ ಶಾಲೆಗಳಿಗೆ | 8.75 ಲಕ್ಷ |
| 5) | ಶಿಕ್ಷಕರ ಅನುದಾನ 6 ಮತ್ತು 7ನೇ ತರಗತಿ ಶಿಕ್ಷಕರು ಸರ್ಕಾರಿ ಶಾಲೆ ಮಾತ್ರ | 2.115 ಲಕ್ಷ |
| 6) | ಅನುದಾನಿತ ಶಾಲೆಗಳಿಗೆ ಶಾಲಾ ಅನುದಾನ | 0.58 ಲಕ್ಷ |
| | ಒಟ್ಟು | **30.145 ಲಕ್ಷ** |

ಇ) ಖರ್ಚಾಗದೇ ಉಳಿದ ರೂ.2.68 ಲಕ್ಷಗಳನ್ನು ಮಾರ್ಚ್ 2003ರ ಅಂತ್ಯದವರೆಗೆ ಬಳಸಿಕೊಳ್ಳಲಾಗುವುದು.

**ಶಾಸಕರ ಹಾಗೂ ಸಂಸದರ ನಿಧಿಯಂತೆ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಸದಸ್ಯರಿಗೆ ವಾರ್ಷಿಕ ನಿಧಿ ಒದಗಿಸುವುದು**

1020 (1335) ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಸಕರಿಗೆ ಹಾಗೂ ಸಂಸದರಿಗೆ ಒದಗಿಸಲಾಗಿರುವ ನಿಧಿಯಂತೆ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಸದಸ್ಯರಿಗೆ ಸಹ ವಾರ್ಷಿಕ ನಿಧಿ ನೀಡಲಾಗಿದೆಯೇ, ನೀಡಲಾಗಿದ್ದರೆ ಈ ನಿಧಿಯ ಮೊತ್ತವೆಷ್ಟು; (ಜಿಲ್ಲಾವಾರು ವಿವರ ಒದಗಿಸುವುದು).